## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

### ಶಾಂತಿನಗರ ಉಪವಿಭಾಗ, 7ನೇ ಮಹಡಿ ಪಿ.ಯು.ಕಟ್ಟಡ, ಮೇಯೋಹಾಲ್, ಎಂ.ಜಿ.ರಸ್ತೆ, ಬೆಂಗಳೂರು.

ಸಂಖ್ಯೆ : ಎ.ಇ.ಇ/ಶಾನ/ಪಿಆರ್/429/2020-21

ದಿನಾಂಕ : 30-03-2021

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ, ಶಾಂತಿನಗರ ವಿಭಾಗ, ಪೂರ್ವ ವ್ಯಾಪ್ತಿಗೆ ಒಳಪಡುವ ವಾರ್ಡ್ ಸಂಖ್ಯೆ -116 ನೀಲಸಂದ್ರದ ವಾರ್ಡ್ ಸಮಿತಿ ಸಭೆಯನ್ನು ಎಲ್.ಆರ್.ನಗರ, ರಸ್ತೆಯಲ್ಲಿನ ವಾರ್ಡ್ ಸಂಖ್ಯೆ -116 ನೀಲಸಂದ್ರದ ವಾರ್ಡ್ ಕಛೇರಿಯಲ್ಲಿ ದಿನಾಂಕ : 29-03-2021 ರಂದು ಬೆಳಿಗ್ಗೆ 11:00 ಗಂಟೆಗೆ ಸಭೆಯಲ್ಲಿ ಚರ್ಚಿಸಲಾದ ಸಭೆಯ ನಡವಳಿಗಳು.**

**ಸಭೆಗೆ ಹಾಜರಿದ್ದ ಸದ್ಯಸರು ಹಾಗೂ ಅಧಿಕಾರಿಗಳು:-**

| ಕ್ರಮ ಸಂಖ್ಯೆ | ಸದ್ಯಸರ ಹೆಸರುಗಳು |
|---|---|
| 1 | ಡಾ|| ಸಂಗಮಿತ್ರ ನೂಡಲ್ ಅಧಿಕಾರಿ (ನೀಲಸಂದ್ರ 116) ಹಾಗೂ ಉಪ ಆರೋಗ್ಯಾಧಿಕಾರಿಗಳು ಪೂರ್ವ. |
| 2 | ಶ್ರೀ ಹರ್ಷ ಎಸ್, ಕಿರಿಯ ಅಭಿಯಂತರರು (ಕಾರ್ಯದರ್ಶಿ) |
| 3 | ಶ್ರೀ ಅಕ್ರಮ್ ಪಾಷಾ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ. |
| 4 | ಶ್ರೀ ನೀಲಾಂಜನಪ್ಪಾ, ಕಿರಿಯ ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 5 | ಶ್ರೀ ನವೀನ್‌ಕುಮಾರ್, ಮಾರ್ಷಲ್ (ನೀಲಸಂದ್ರ) |
| 6 | ಶ್ರೀ ಮಂಜುನಾಥ್.ಆರ್, ಕಂದಯವಸುಲಿಗಾರರು (ನೀಲಸಂದ್ರ) |
| 7 | ಶ್ರೀ ಸಂಪಂಗಿರಾಮ, ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 8 | ಶ್ರೀ ತುಳಸಿರಾಮ, ಆರೋಗ್ಯ ಪರಿವೀಕ್ಷಕರು, (ನೀಲಸಂದ್ರ) |
| 9 | ಶ್ರೀ ನಂಜುಂಡಯ್ಯ, ಸಹಾಯಕ ಅಭಿಯಂತರರು, ಬೋರ್‌ವೇಲ್ ವಿಭಾಗ (ನೀಲಸಂದ್ರ) |
| 10 | ಶ್ರೀ ಮುತ್ತು, ಸದ್ಯಸರು (ನೀಲಸಂದ್ರ) |
| 11 | ಶ್ರೀಮತಿ ಸುಮತಿ, ಸದ್ಯಸರು (ನೀಲಸಂದ್ರ) |
| 12 | ಶ್ರೀ ಶಿವಕುಮಾರ್, ಸದ್ಯಸರು (ನೀಲಸಂದ್ರ) |

ಸಮಿತಿಯ ಅಧ್ಯಕ್ಷರಾದ, ಶ್ರೀಮತಿ. ಡಾ|| ಸಂಗಮಿತ್ರ ನೂಡಲ್ ಅಧಿಕಾರಿಗಳು, ರವರ ಅಧ್ಯಕ್ಷತೆಯಲ್ಲಿ ಸಭೆಯನ್ನು ಪ್ರಾರಂಭಿಸುತ್ತಾ ಸಭೆಯಲ್ಲಿ ಹಾಜರಿದ್ದ ಸದಸ್ಯರನ್ನು, ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಹಿಂದಿನ ಸಭೆಯಲ್ಲಿ ಕೈಗೊಂಡಿರುವ ನಡುವಳಿಗಳ ಕ್ರಮಗಳ ಬಗ್ಗೆ ಚರ್ಚಿಸುತ್ತಾ, ಸಭೆಯನ್ನು ಪ್ರಾರಂಭಿಸಿದರು.

| ಕ್ರಮ ಸಂಖ್ಯೆ | ಮಾಹಿತಿ | ಕ್ರಮವಹಿಸಬೇಕಾದ ಅಧಿಕಾರಿಗಳು |
|---|---|---|
| ❖ | **ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (BBMP)** | |
| **1** | **ಕಾಮಗಾರಿ ಇಲಾಖೆ (Engineering Department)** | |
| | ➕ ಶ್ರೀ ಮುತ್ತು ರವರು ಎಲ್.ಆರ್.ನಗರ ಮುಖ್ಯರಸ್ತೆಯಲ್ಲಿ ಹಾಗೂ ಸೇತುವೆ ಬಳಿ ಡೆಬ್ರೀಸ್‌ನ್ನು ತೆರವುಗೊಳಿಸಲು ಕೋರಿದರು.<br>➕ ಶ್ರೀಮತಿ ಸುಮತಿ ರವರು ಎಲ್.ಆರ್.ನಗರದ ಸೇತುವೆಯ Fencing ಅನ್ನು ಸರಿಪಡಿಸಲು ಕೋರಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು/ಸಹಾಯಕ ಅಭಿಯಂತರರು. |

| | | |
|---|---|---|
| 2 | **ಘನತ್ಯಾಜ್ಯಾ ನಿರ್ವಹಣೆ ಶಾಂತಿನಗರ (SWM Department)** | |
| | ➧ ಶ್ರೀಮತಿ ಸುಮತಿ ರವರು ಮಾತನಾಡುತ್ತಾ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ರಸ್ತೆಗಳಿಗೂ ಕಸದ ವಾಹನಗಳನ್ನು ಕಳುಹಿಸಿ ಹಸಿತ್ಯಾಜ್ಯ ಮತ್ತು ಒಣತ್ಯಾಜ್ಯವನ್ನು ವಿಂಗಡಿಸಿ ಸರ್ಮಪಕವಾಗಿ ಕಾರ್ಯನಿರ್ವಹಿಸಲು ಹಾಗೂ ಸ್ವಚ್ಛತೆ ಕಾಪಾಡಲು ಪೌರಕಾರ್ಮಿಕರಿಗೆ ಕೈ ಕವಚ, ಮಾಸ್ಕ್‌ಗಳನ್ನು ನೀಡಲು ಹಾಗೂ ಮೂಲಭೂತ ಸೌಕರ್ಯಗಳಾದ ಸಮವಸ್ತ್ರಗಳನ್ನು ಬದಲಿಸಲು ಸಮರ್ಪಕವಾದ ಸ್ಥಳವನ್ನು ಕಲ್ಪಿಸಿಕೊಡಲು ಕೋರಿದರು.<br>➧ ಶ್ರೀ ಮುತ್ತು ರವರು ಮಾತನಾಡುತ್ತಾ, ಕಸದ ವಾಹನಗಳಿಗೆ Speaker ಗಳನ್ನು ಅಳವಡಿಸಲು ಕೋರಿದರು. | ಕಿರಿಯ ಆರೋಗ್ಯ ಪರಿವೀಕ್ಷಕರು, (ಶಾಂತಿನಗರ) ಉಪ ವಿಭಾಗ |
| 3 | **ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ (BWSSB)** | |
| | ➧ ಶ್ರೀ ಶೀವು ರವರು ಮಾತನಾಡುತ್ತಾ, ರೋಸ್ ಗಾರ್ಡನ್ ಅಡ್ಡರಸ್ತೆಯಲ್ಲಿ ಮ್ಯಾನ್‌ಹೋಲ್‌ಗಳು ತಗ್ಗು ಪ್ರದೇಶದಲ್ಲಿದ್ದು ಹಾಗೂ ರೋಸ್‌ಗಾರ್ಡನ್ ಅಡ್ಡರಸ್ತೆಗಳಲ್ಲಿ ಶುದ್ಧ ಕುಡಿಯುವ ನೀರಿನ್ನು ಸರ್ಮಪಕವಾಗಿ ಕಲ್ಪಿಸಿಕೊಡಲು ಕೋರಿದರು. | ಸಹಾಯಕ ಅಭಿಯಂತರರು. BWSSB |
| 4 | **ಪೊಲೀಸ್ ಇಲಾಖೆ ( ಸಂಚಾರ ಮತ್ತು ಕಾ&ಸು) (Traffic Police, Law & Order)** | |
| | ➧ ಶ್ರೀ ಮುತ್ತು ರವರು ಮಾತನಾಡುತ್ತಾ, ಎಲ್.ಆರ್. ನಗರ ಕ್ರಾಸ್ ಪ್ರದೇಶಗಳಲ್ಲಿ ಕಾನೂನು ಬಾಹಿರವಾಗಿ ಅನಧಿಕೃತ ಚಟುವಟಿಕೆಗಳು ನಡೆಯುತ್ತಿದ್ದು ಹಾಗೂ ಬಹಳಷ್ಟು ಜನ ಗುಂಪು ಸೇರುವುದು ಇದರ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು.<br>➧ ಶ್ರೀಮತಿ ಸುಮತಿ ರವರು ಮಾತನಾಡುತ್ತಾ ಎಲ್.ಆರ್. ನಗರ ಸೇತುವೆ ಬಳಿ ಹಾಗೂ ಎಲ್.ಆರ್. ನಗರ ಮುಖ್ಯರಸ್ತೆಯಲ್ಲಿ ಅನಧಿಕೃತವಾಗಿ ವಾಹನಗಳು ನಿಲ್ಲಿಸಿದ್ದು, ಅದನ್ನು ತೆರವುಗೊಳಿಸಲು ಕೋರಿದರು. | Ashoknagara/Adugodi Traffic Police, Law & Order Department |

ಅಂತೀಮವಾಗಿ ಅಧ್ಯಕ್ಷರು ಮಾತನಾಡುತ್ತಾ, ಮೇಲೆ ತಿಳಿಸಿರುವಂತೆ ಸಂಬಂಧಿಸಿದ ಎಲ್ಲಾ ಅಧಿಕಾರಿಗಳು ಕೆಲಸ ನಿರ್ವಹಿಸಲು ಕೊರುತ್ತಾ ಮುಂದಿನ ಸಭೆಯಷ್ಟರಲ್ಲಿ ಸಂಬಂಧಿಸಿದ ಎಲ್ಲಾ ದೂರುಗಳನ್ನು ಪರಿಗಣಿಸಿ ಮುಂದಿನ ಸಭೆಯಲ್ಲಿ ತಿಳಿಸಲು ಕೋರಿದೆ ಹಾಗೂ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಂಡು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿದರು, ಮುಂದಿನ ಸಭೆಯಲ್ಲಿ ಇನ್ನಿತರ ಸಮಸ್ಯೆಗಳ ಬಗ್ಗೆ ಚರ್ಚಿಸಲು ಸಮಿತಿಯ ಸದ್ಯಸರುಗಳಿಗೆ ತಿಳಿಸುತ್ತಾ ಸಭೆಯಲ್ಲಿ ಹಾಜರಿದ್ದ ಎಲ್ಲಾ ಅಧಿಕಾರಿಗಳು ಹಾಗೂ ಸದ್ಯಸರುಗಳಿಗೆ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

**ಕಾರ್ಯದರ್ಶಿ ಮತ್ತು**
**ಸಹಾಯಕ ಅಭಿಯಂತರರು**
**ವಾರ್ಡ ಸಂಖ್ಯೆ –116 ನೀಲಸಂದ್ರ**

**ನೋಡಲ್ ಅಧಿಕಾರಿ ವಾರ್ಡ್–116 ಹಾಗೂ**
**ಉಪ ಆರೋಗ್ಯ ವೈದ್ಯಾಧಿಕಾರಿಗಳ**
**ವಾರ್ಡ ಸಂಖ್ಯೆ –116 ನೀಲಸಂದ್ರ**

**ಪ್ರತಿಗಳನ್ನು :–**

1) ಮಾನ್ಯ ಆಯುಕ್ತರು, ಆಪ್ತ ಸಹಾಯಕರಿಗೆ ಕಳುಹಿಸುತ್ತಾ, ಮಾನ್ಯ ಆಯುಕ್ತರ ಗಮನಕ್ಕೆ ತರುವಂತೆ ಕೋರಿದೆ.
2) ವಿಶೇಷ ಆಯುಕ್ತರು ಆಡಳಿತ ರವರ ಅವಗಾಹನೆಗೆ ಸಲ್ಲಿಸಿದೆ.
3) ಜಂಟಿ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
4) ವಲಯ ಆಯುಕ್ತರು, ಪೂರ್ವ ವಲಯ ರವರ ಅವಗಾಹನೆಗೆ ಸಲ್ಲಿಸಿದೆ.
5) ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು ರವರ ಅವಗಾಹನೆಗೆ ಸಲ್ಲಿಸಿದೆ.
6) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ಉಪ ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
7) ಸಹಾಯಕ ಕಾರ್ಯಪಾಲಕ ಅಭಿಯಂತರರು, ಶಾಂತಿನಗರ (ಘನತ್ಯಾಜ್ಯಾ ನಿರ್ವಹಣೆ) ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.
8) ಸಹಾಯಕ ಕಂದಾಯ ಅಧಿಕಾರಿಗಳು, ಶಾಂತಿನಗರ, ಉಪ ವಿಭಾಗ, ರವರ ಅವಗಾಹನೆಗೆ ಸಲ್ಲಿಸಿದೆ.
9) ಕಾರ್ಯಪಾಲಕ ಅಭಿಯಂತರರು, ಶಾಂತಿನಗರ, ವಿಭಾಗ ರವರ ಅವಗಾಹನೆಗೆ ಸಲ್ಲಿಸಿದೆ.
10) ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ರವರ ಅವಗಾಹನೆಗೆ ಸಲ್ಲಿಸಿದೆ.

6/4/2021

ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ರವರ ಅವಗಾಹನೆಗೆ ಸಲ್ಲಿಸಿದೆ.

12) ಆಡುಗೋಡಿ/ಅಶೋಕನಗರ, ಟ್ರಾಫೀಕ್ ಮತ್ತು ಲಾ & ಆರ್ಡರ್ ಪೊಲೀಸ್ ಇಲಾಖೆ, ರವರ ಅವಗಾಹನೆಗೆ ಸಲ್ಲಿಸಿದೆ.

13) ಆರೋಗ್ಯಾಧಿಕಾರಿಗಳು, ಶಾಂತಿನಗರ, ರವರ ಅವಗಾಹನೆಗೆ ಸಲ್ಲಿಸಿದೆ.

14) ಕಛೇರಿ ಕಡತಕ್ಕೆ.